

# ಎಸ್. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ತಮ್ಮ ಅನನ್ಯ ಬರವಣಿಗೆಯಿಂದ ಕನ್ನಡ ಓದುಗರ ಪ್ರೀತಿಗೆ ಪಾತ್ರರಾದವರು. ಸಣ್ಣಕಥೆ, ಕಾವ್ಯ, ಪ್ರಬಂಧ, ವಿಮರ್ಶೆ, ಅಂಕಣ ಬರಹ, ಭಾಷಾಂತರ, ಸಂಪಾದನೆ ಇವೆಲ್ಲ ಪ್ರಕಾರಗಳಲ್ಲಿ ಕೆಲಸ ಮಾಡಿರುವ ಅವರು, ಅವುಗಳಲ್ಲಿ ವಿಶಿಷ್ಟವಾದುದ್ದನ್ನು, ಮಹತ್ವವಾದುದ್ದನ್ನು ಸೃಷ್ಟಿಸಿದ್ದಾರೆ. ತಮ್ಮ ಕತೆಗಳಲ್ಲಿ ಪ್ರಖರ, ನಿಖರ ಶಿಲ್ಪವನ್ನು ಕಟ್ಟಿದ ದಿವಾಕರ್ ತಮ್ಮ ಕತೆಗಳನ್ನು ಕಾವ್ಯಕ್ಕೆ ಹತ್ತಿರವಾಗಿ ಬರೆಯಲು ಪ್ರಯತ್ನಿಸಿದವರು. ಅವರು ಕತೆಗಳಲ್ಲಿ ಮಾಡಿದ ಪ್ರಯೋಗಗಳು ಸಮಕಾಲೀನ, ಯುವ ಲೇಖಕರಿಗೆ ಮಾರ್ಗದರ್ಶಿಯಾಗಿವೆ.

'ಸುಧಾ', 'ಪ್ರಜಾವಾಣಿ' ಪತ್ರಿಕೆಗಳಲ್ಲಿ ಕೆಲಸ ಮಾಡಿ, ಬಳಿಕ ಅಮೆರಿಕನ್ ಕಾನ್ಸುಲೇಟ್ ಕಚೇರಿಯಲ್ಲಿ ಕನ್ನಡ ಸಂಪಾದಕರಾಗಿದ್ದರು. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲಬಲ್ಲವರಿಲ್ಲ ಈ ಊರಿಲ್ಲಿ', 'ಆಯ್ದ ಕತೆಗಳು' (ಕಥಾ ಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ' (ಕವನ ಸಂಕಲನ), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿಸಣ್ಣ ಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು), 'ಮಾಸ್ಟರ್ ಬಿಲ್ಡರ್ '(ಅನುವಾದಿತ ನಾಟಕ), 'ಶತಮಾನದ ಸಣ್ಣಕತೆಗಳು', 'ಸಣ್ಣಕತೆ 1983', 'ಕನ್ನಡ ಅತಿ ಸಣ್ಣಕತೆಗಳು', 'ನಾದದ ನವನೀತ', 'ಬೆಸ್ಟ್ ಆಫ್ ಕೇಫ' (ಸಂಪಾದಿತ ಕೃತಿಗಳು). 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಅವರ ಕಥೆಗಳು ಮೂರು ಬಾರಿ ಬಹುಮಾನ ಪಡೆದಿವೆ 'ಮೃತ್ಯುಂಜಯ'(1978), 'ಕ್ರೌರ್ಯ'(1979), 'ಎಲ್ಲಬಲ್ಲವರಿಲ್ಲ ಈ ಊರಿನಲ್ಲಿ' (1992). ದಿವಾಕರ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಮನೋರೋಗದ ಚರಿತ್ರೆಯಲ್ಲ ಅಥವಾ ಘಟನೆಯೊಂದರ ವರದಿಯಲ್ಲ. ಇದು ಯಾವುದೂ ಸಣ್ಣಕತೆಯಾಗುವುದಿಲ್ಲ. ಯಾಕೆಂದರೆ ಸಣ್ಣಕತೆಗೆ ಹೆಚ್ಚು ಆಯಾಮಗಳಿವೆ. ನನಗೆ ಅನ್ನಿಸುವಂತೆ, ಕತೆಗಾರ ಯಾವುದಾದರೊಂದು ಮಾನವ ಚಟುವಟಿಕೆಯ ನಡುವೆ ನಮ್ಮನ್ನು ನಿಲ್ಲಿಸಿದಾಗ ಆ ಹೆಚ್ಚಿನ ಆಯಾಮಗಳು ಲಭ್ಯವಾಗುತ್ತವೆ."

ಒಂದು ಒಳ್ಳೆಯ ಸಣ್ಣಕತೆ ತನ್ನ ಸಾಮಾಜಿಕ, ರಾಜಕೀಯ, ನೈತಿಕ, ಮನೋವೈಜ್ಞಾನಿಕ ಆಯಾಮಗಳಿಂದ, 'ಮುಂದೇನು?' ಎಂದು ಕುತೂಹಲ ಹುಟ್ಟಿಸುವ ನಿರೂಪಣೆಯಿಂದ ಓದುಗನನ್ನು ತನ್ನೊಳಗೆ ತೊಡಗಿಸಿಕೊಳ್ಳುತ್ತದೆ. ಕಾದಂಬರಿ ಪ್ರತಿಯೊಂದನ್ನೂ ವಿವರಿಸಿ ಜಾಳುಜಾಳಾಗಬಹುದಾದ ತನ್ನ ಭಾಗಗಳನ್ನು ಕೊನೆಗೂ ಸರಿಪಡಿಸಿಕೊಳ್ಳಬಹುದು. ಆದರೆ